O.S. No.14/2015 P.W. 1 Dated :12-06-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಂ.ಬಿ.ಜಿ . 2 ನೇ ಪ್ರತಿವಾದಿ ಪರ ವಕೀಲರಿಂದಃ-

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ದಾವೆ ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. 1987 ರಲ್ಲಿ ನನ್ನ ದಾವಾ ಸ್ವತ್ತನ್ನು ಖರೀದಿ ಮಾಡಿದರು. ಸುಮಾರು 5 ವರ್ಷಗಳ ಹಿಂದೆ ನನ್ನ ಗಂಡ ಮರಣ ಹೊಂದಿರುತ್ತಾರೆ. ನನಗೆ 2 ಜನ ಹೆಣ್ಣುಮಕ್ಕಳಿರುತ್ತಾರೆ. ದಾವಾ ಸ್ವತ್ತಿನ ಖಾತಾ ನಂಬರ್ ನನಗೆ ಗೊತ್ತಿರುವುದಿಲ್ಲ. ಪೂರ್ವ-ಪಶ್ಚಿಮ 36 ಅಡಿ , ಉತ್ತರ -ದಕ್ಷಿಣ 22 ಅಡಿ . ಪೂರ್ವ-ಪಶ್ಚಿಮ 36 ಅಡಿಯಲ್ಲಿ 31 ಅಡಿ ಮನೆ ನಿರ್ಮಿಸಿಕೊಂಡಿದ್ದು , ಉಳಿಕೆ 5 ಅಡಿಯಲ್ಲಿ ಮಹಡಿ ಮೆಟ್ಟಿಲು ನಿರ್ಮಿಸಿಕೊಂಡಿರುತ್ತೇನೆ. ದಾವಾ ಸ್ವತ್ತಿನ ಚಕ್ಕುಬಂದಿ ತಿಳಿದಿರುತ್ತದೆ. ಪೂರ್ವಕ್ಕೆಃ ಅಣ್ಣಾಜಿಗೌಡರ ಮನೆ , ಪಶ್ಚಿಮಕ್ಕೆಃ ರಸ್ತೆ , ಉತ್ತರಕ್ಕೆಃ ಮುಸ್ಲೀಮರ ಮನೆ , ದಕ್ಷಿಣಕ್ಕೆಃ ಪುಟ್ಟಸ್ವಾಮಿಗೌಡರ ಮನೆ. ನನ್ನ ಗಂಡ ಖಾಲಿ ನಿವೇಶನವನ್ನು ಖರೀದಿ ಮಾಡಿದರು , ಆನಂತರ ಮನೆ ನಿರ್ಮಿಸಿದರು. ಮನೆ ನಿರ್ಮಿಸಲು 2 ನೇ ಪ್ರತಿವಾಯಿಂದ ಅನುಮತಿ ಪತ್ರ ಪಡೆದು ಮನೆ ನಿರ್ಮಿಸಿಕೊಂಡಿರುತ್ತೇನೆ. ಅನುಮತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವೆ ಹೂಡುವ ಸಮಯದಲ್ಲಿ ರಸ್ತೆ ನಿರ್ಮಿಸಲು ನನಗೆ 2 ನೇ ಪ್ರತಿವಾದಿ ತೊಂದರೆ ನೀಡುತ್ತಿದ್ದರು. ನಾನು ನಿವೇಶನ ಕೊಳ್ಳುವಾಗಲೇ ರಸ್ತೆ ಇತ್ತು ಎಂದರೆ ಸಾಕ್ಷಿಯು ಮೊದಲು ಚಿಕ್ಕದಾಗಿ ರಸ್ತೆ ಇದ್ದು, ಅದನ್ನು ಅಗಲೀಕರಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ದಾವೆ ಹೂಡಿದ 4 ವರ್ಷಗಳ ನಂತರ ರಸ್ತೆ ಅಗಲೀಕರಣ ಮಾಡಿರುತ್ತಾರೆ. ರಸ್ತೆ ಅಗಲೀಕರಣ ವೇಳೆಯಲ್ಲಿ ನಿಮ್ಮ ಮನೆಗೆ ಹಾಗೂ ಮಹಡಿ ಮೆಟ್ಟಿಲುಗಳಿಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ ಎಂದರೆ ಸಾಕ್ಷಿಯು ತೊಂದರೆ ಆಗದಂತೆ ನಾವು ತಡೆದಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂದಿನ ಮೆಟ್ಟಿಲುಗಳು ಹಾಗೂ ಫಿಟ್ ಗುಂಡಿಗೆ ಯಾವುದೇ ರೀತಿ ತೊಂದರೆಯಾಗಿರುವುದಿಲ್ಲ , ದಾವೆ ಹೂಡುವ ವೇಳೆಯಲ್ಲಿ ಅವುಗಳು ಯಾವ ರೀತಿ ಇದ್ದವೋ ಈಗಲೂ ಸಹ ಅದೇ ರೀತಿ ಇವೆ ಎಂದು ನುಡಿಯುತ್ತಾರೆ. ಅನುಮತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ

ಸಾಕ್ಷಿಯು ಅದನ್ನು ಸಾಲ ಪಡೆದುಕೊಳ್ಳಲು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಇಬ್ಬರು ಮಕ್ಕಳನ್ನು ಪಕ್ಷಗಾರರಾಗಿ ಮಾಡದ ಕಾರಣ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ವಿಲ್ ಮುಖಾಂತರ ನನಗೆ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ವಿಲ್ ಮುಖಾಂತರ ದಾವಾ ಸ್ವತ್ತಿನ ವರ್ಗಾವಣೆಯಾಗಿರುವ ವಿಷಯವನ್ನು ನಾನು ನನ್ನ ದಾವೆಯಲ್ಲಿ ತಿಳಿಸಿರುವುದಿಲ್ಲ. ಯಾವ ದಿನಾಂಕದಂದು ಪ್ರತಿವಾದಿಯರು ದಾವಾ ಸ್ವತ್ತಿನ ಬಳಿ ಬಂದು ತೊಂದರೆ ನೀಡಿರುತ್ತಾರೆ ಎಂದು ನನಗೆ ನಿರ್ಧಿಷ್ಟವಾಗಿ ದಿನಾಂಕವನ್ನು ಹೇಳಲಾಗುವುದಿಲ್ಲ. ಪ್ರತಿವಾದಿಗಳು ಎಂದಿಗೂ ಸಹಾ ದಾವಾ ಸ್ವತ್ತಿನ ಬಳಿ ಬಂದು ನನಗಾಗಲೀ , ನನ್ನ ಸ್ವತ್ತಿಗಾಗಲೀ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಂದಿಗೂ ಸಹ ತೊಂದರೆ ನೀಡದಿದ್ದರೂ ಸಹ ಅವರ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈಗಾಗಲೇ ರಸ್ತೆ ಅಗಲೀಕರಣ ಕಾರ್ಯ ಮುಗಿದಿದ್ದು , ಅದರಿಂದ ನಿಮ್ಮ ಸ್ವತ್ತಿಗೆ ಯಾವುದೇ ರೀತಿ ತೊಂದರೆಯಾಗದಿರುವ ಕಾರಣ ನೀವು ದಾವೆಯಲ್ಲಿ ಕೋರಿರುವಂತೆ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಚರಂಡಿ ಕೆಲಸ ಮುಕ್ತಾಯವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ನಿವೇಶನ ಭೂಮಿಯನ್ನು ಖರೀದಿ ಮಾಡಿದ್ದರು. ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.